ಶ್ರೀಮತಿ ಮೋಟಮ್ಮ : ಸನ್ಮಾನ್ಯ ಅಧ್ಯಕ್ಷರೇ ,40 ಪರ್‌ಸೆಂಟ್‌ನಿಂದ 50 ಪರ್‌ಸೆಂಟ್ ಈ ಸಾರಿ ಬಡ್ಜೆಟ್‌ನಲ್ಲಿ ಜಾಸ್ತಿ ಮಾಡಿದ್ದೇವೆಂದು ಹೇಳಿದ್ದಾರೆ. ಜಿಲ್ಲಾ ಪರಿಷತ್ತು ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆಗನುಸಾರವಾಗಿ ಜಿಲ್ಲಾ ಪರಿಷತ್ತುನವರಿಗೆ ಮೆಡಿಸನ್ ಕೊಡುವುದಕ್ಕೆ ಆದೇಶ ನೀಡುತ್ತೀರ ಎಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಅಧ್ಯಕ್ಷರೇ, ಶ್ರೀಮತಿ ಮೋಟಮ್ಮನವರು ಹೇಳಿದ ಹಾಗೆ ಎಷ್ಟು ರೋಗಿಗಳು ಅಲ್ಲಿಗೆ ಬರುತ್ತಾರೆಂದು ಸರಿಯಾಗಿ ಗೊತ್ತಿದ್ದರೆ ಔಷಧಿ ಜಾಸ್ತಿ ಮಾಡಬಹುದು. ಏಕೆಂದರೆ ಔಷಧಿ ಇಲ್ಲದ ಪಿ.ಹೆಚ್.ಸಿ ಗಳನ್ನು ನಾವು ಗಮನದಲ್ಲಿ ಇಟ್ಟುಕೊಂಡು ಯಾವ ರೀತಿಯಲ್ಲಿ ಔಷಧಿ ಕೊಡಬೇಕೆಂದು ಪರಿಶೀಲನೆ ಮಾಡಿ, ಬರುವ ವರ್ಷದಲ್ಲಿ ಸರಿಯಾದ ವ್ಯವಸ್ಥೆ ಮಾಡುತ್ತೇವೆ.

<u>ವಿಷಯ : ಖಾಸಗಿ ಅನುದಾನ ಪಡೆಯುವ ಪ್ರೌಢ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ .</u>

866

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನುದಾನ ಪಡೆಯುತ್ತಿರುವ ಖಾಸಗಿ ಪ್ರೌಢ ಶಾಲೆಗಳಲ್ಲಿನ ಶಿಕ್ಷಣ ಮಟ್ಟವನ್ನು ಉತ್ತಮಪಡಿಸಲು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಉತ್ತೀರ್ಣರಾದರೆ ಅಂಥ ಪ್ರೌಢಶಾಲೆಗಳಿಗೆ ಸರ್ಕಾರ ಅನುದಾನವನ್ನು ನಿಲ್ಲಿಸುವ ವ್ಯವಸ್ಥೆ ಇದೆಯೇ?

ಆ) ಹಾಗಿದ್ದಲ್ಲಿ, ಈ ರೀತಿಯ ವ್ಯವಸ್ಥೆಯನ್ನು ಸರ್ಕಾರಿ ಶಾಲೆಗಳಲ್ಲಿ ಅನ್ವಯಿಸದಿರಲು ಕಾರಣಗಳೇನು?

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಕೆಲವು ಹೈಸ್ಕೂಲ್‌ನಲ್ಲಿ ಅದು ಖಾಸಗಿ ಶಾಲೆ ಆಗಬಹುದು. ಸರ್ಕಾರಿ ಶಾಲೆ ಆಗಬಹುದು. ಒಳ್ಳೆಯ ರಿಸಲ್ಟ್ 80-90 ಪರ್‌ಸೆಂಟ್ ಬರುತ್ತದೆ. ಕೆಲವು ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ.ಯ ಪರೀಕ್ಷೆಯಲ್ಲಿ 100 ಪರ್‌ಸೆಂಟ್ ಪಾಸು ಆಗಿರುವ ಉದಾಹರಣೆ ಉಂಟು. ಕೆಲವು ಶಾಲೆಯಲ್ಲಿ ಸೊನ್ನೆ ಒಂದೂ ಪಾಸೂ ಆಗುವುದಿಲ್ಲ. ಇಂಥ ಉದಾಹರಣೆಯೂ ಉಂಟು. ಅಲ್ಲಿರುವವರೆಗೆ ಯಾವ ಪ್ರಕಾರ ಸಂಬಳ ಕೊಡುತ್ತೀರೋ, ನೂರಕ್ಕೆ ನೂರು ಫೇಲ್ ಆದಂಥ ಶಾಲೆಯವರಿಗೂ ಟಿ.ಎ, ಡಿಎ, ಭತ್ಯ ವಗೈರೆ ಎಲ್ಲವನ್ನೂ ಸೊಗಸಾಗಿ ಕೊಡುತ್ತೀರಿ. ಇಂಥ ಶಾಲೆಗಳ ಶಿಕ್ಷಕರುಗಳನ್ನು ಶಿಕ್ಷಿಸಲಿಕ್ಕೆ ವಿವೇಚನೆ ಏನೂ ಇಲ್ಲವೆ ದಯವಿಟ್ಟು ಇದರ ಬಗ್ಗೆ ಹೇಳಬೇಕು.

ಡಾ ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಶಾಲೆಗಳಲ್ಲಿ ರಿಸಲ್ಟ್ ಉತ್ತಮವಾಗಿ ಬರುತ್ತದೆ, ಇನ್ನು ಕೆಲವೊಂದು ಶಾಲೆಗಳಲ್ಲಿ ಕೆಳಮಟ್ಟದಲ್ಲಿ ಉತ್ತೀರ್ಣತೆಯನ್ನು ನಾವು ನೋಡುತ್ತೇವೆ. ಖಾಸಗಿ ಶಾಲೆಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದು ಕಠಿಣವಾಗಿರುವುದರಿಂದ, ನಾವು ಈಗಾಗಲೇ ಎಚ್ಚರಿಕೆಯನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಈ ರೀತಿಯಲ್ಲಿ ಯಾವುದೇ ಶಾಲೆಗಳಲ್ಲಿ ರಿಸಲ್ಟ್ ಕಡಿಮೆ ಆಯಿತು ಎಂದರೆ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ನಾವೆಂದೂ ಹಿಂದು ಮುಂದು ನೋಡುವುದಿಲ್ಲ. ಸರ್ಕಾರಿ ಶಾಲೆಗಳಲ್ಲಿ ಹಾಗೇನಾದರೂ ಆಯಿತು ಎಂದರೆ ಅಧ್ಯಾಪಕರ ಬಗ್ಗೆ ನಾವು ಬೇರೆ ರೀತಿಯಲ್ಲಿ ವಿಚಾರ ಮಾಡಬೇಕಾಗುತ್ತದೆ. ಅವರ ಮೇಲೆಯೂ ಸಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ಪನುಮೇಗೌಡ : ಕೆಲವು ಶಾಲೆಗಳಲ್ಲಿ ಒಳ್ಳೆಯ ಅಧ್ಯಾಪಕರು ಇರುತ್ತಾರೆ. ಅಲ್ಲಿ ಮಕ್ಕಳು ಚೆನ್ನಾಗಿ ಓದುತ್ತಾರೆ. ಅವರು ಜೀವನದಲ್ಲೂ ಯಶಸ್ಸು ಪಡೆಯುತ್ತಾರೆ. ಕೆಲವು ಶಾಲೆಗಳಲ್ಲಿ ಯಾರದೋ ತಾತ್ಸಾರದಿಂದ, ಬೇಜವಬ್ದಾರಿಯಿಂದ ಮಕ್ಕಳು ಸರ್ವನಾಶವಾಗುತ್ತಾರೆ. ತಂದೆತಾಯಿಗಳು ಕಷ್ಟಪಟ್ಟು ಶಾಲೆಗೆ ದುಡ್ಡು ಕಟ್ಟುತ್ತಾರೆ, ಬಟ್ಟೆ ಕೊಡಿಸುತ್ತಾರೆ, ಮನೆಯ ಕೆಲಸ ಕಾರ್ಯಗಳನ್ನು ನೋಡಿಕೊಂಡು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಶಾಲೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಸರಿ ಇಲ್ಲದಿದ್ದರೆ ಅವರ ತಂದೆತಾಯಿಗಳಿಗೆ ದ್ರೋಹ , ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ? ಆದ್ದರಿಂದ ಇದರ ಬಗ್ಗೆ ತಾವು ಏನು ಆಕ್ಷೆನ್ ತೆಗೆದುಕೊಳ್ಳುತ್ತೀರಾ, ದಯಮಾಡಿ ತಿಳಿಸಬೇಕು. ಕೆಲವು ಶಾಲೆಗಳಲ್ಲಿ ಜವಬ್ದಾರಿಯಿಂದ ಪಾಠ ಮಾಡುತ್ತಾರೆ. ತಾವು ಹೇಳಿದ ಹಾಗೆ ಟ್ರಾನ್ಸ್‌ಫರ್, ಪ್ರೊಮೋಷನ್ ಕೊಟ್ಟು ಕಳುಹಿಸಿದರೆ, ಒಳ್ಳೆಯ ಶಾಲೆಗಳಿಗೆ ಇವರು ಬಂದು ಅಲ್ಲಿ ವಿದ್ಯಾರ್ಥಿಗಳಿಗೆ ಪಾಠಗಳು ಇಲ್ಲದೆ ಅವರು ಫೇಲ್ ಆಗುತ್ತಾರೆ. ಆದ್ದರಿಂದ transfer is not a punishment. ಶಾಲೆಗಳಲ್ಲಿ ನೂರಕ್ಕೆ ನೂರರಷ್ಟು ಪಾಸ್ ಆಗದಿದ್ದರೂ 50-60 ಅವರೆಜ್ ಇರಬೇಕು. ಅದು ಸರ್ಕಾರಿ ಶಾಲೆಯಾಗಲಿ, ಪ್ರೈವೇಟ್ ಶಾಲೆಯಾಗಲಿ, ಇದರ ಬಗ್ಗೆ ಮಾನ್ಯ ಸಚಿವರು ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು.

ಡಾ ॥ ಹೆಗ್ಗಪ್ಪ ಡಿ. ಲಮಾಣಿ : ಮಾನ್ಯ ಅಧ್ಯಕ್ಷರೇ, ವಿದ್ಯಾರ್ಥಿಗಳ ರಿಸಲ್ಟ್ ಸರಿಯಾಗಿ ಬಂದಿರುವುದಕ್ಕೆ ಕಾರಣ ಅಧ್ಯಾಪಕರು ಅಷ್ಟೇ ಅಲ್ಲ, ಸಂಸ್ಥೆಗಳು ಕಾರಣವಾಗುತ್ತವೆ. ವಿದ್ಯಾರ್ಥಿಗಳು ಮತ್ತು ಪರಿಸರವು ಕಾರಣವಾಗುತ್ತದೆ. ಈ ಎಲ್ಲಾ ಕೌಢೀಕರಣದ ಪ್ರತಿಫಲ ಕಾರಣವಾಗುತ್ತದೆ. ಇದಕ್ಕಾಗಿ ಅಧ್ಯಾಪಕರನ್ನು ದೂರುವುದು ಸರಿಯಲ್ಲ. ಅಧ್ಯಾಪಕರು ಏನಾದರೂ ನಿರ್ಲಕ್ಷದಿಂದ ವರ್ತಿಸಿದ್ದರೆ, ಅದು ಸರ್ಕಾರಿ ಶಾಲೆಯಲ್ಲಾಗಲಿ, ಖಾಸಗೀ ಶಾಲೆಯಲ್ಲಾಗಲಿ, ನಿಶ್ಚಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಈ ರೀತಿ ಆಗಿದ್ದರೆ ತಿಳಿಸಿ, ತಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಕೈವಾರ ಯೋಗಿ ನಾರಾಯಣ ಯತೀಂದ್ರ ಶಾಲೆಯಲ್ಲಿ ಉತ್ತೀರ್ಣವಾಗಿರತಕ್ಕದ್ದು ಬರೀ ಸೊನ್ನೆ. ಇದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದಕ್ಕೆ ಸ್ಪೆಸಿಫಿಕ್‌ಆಗಿ ಉತ್ತರ ಹೇಳಿ.

(ಗೊಂದಲ)

ಅಧ್ಯಕ್ಷರು : ಅವರು ಕ್ರಮ ತೆಗೆದುಕೊಳ್ಳುತ್ತಾರೆ, ನೀವು ಉತ್ತರ ಕೊಡಬೇಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಹಾಗಾದರೆ ನಾವು ಏಕೆ ಇಲ್ಲಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಹಾಳಾಗುತ್ತಿದೆ. ಅದನ್ನು ಸಹಿಸಿಕೊಂಡು ಇಲ್ಲಿ ಕುಳಿತುಕೊಳ್ಳಬೇಕೇ?

ಅಧ್ಯಕ್ಷರು : ನಿಮಗೆ ಉತ್ತರ ಬೇಕಾದರೆ ಪುನಃ ಪ್ರಶ್ನೆ ಕೇಳಿ, ಇಲ್ಲ ಬರೆದು ಕಳುಹಿಸಿ ಕ್ರಮ ತೆಗೆದುಕೊಳ್ಳುತ್ತಾರೆ.

(ಶ್ರೀ ಬೈರೇಗೌಡರು ಸಭಾತ್ಯಾಗ ಮಾಡಿದರು)

<u>ವಿಷಯ : ಎಳನಡು , ಶಿರಾ ತಾಲ್ಲೂಕಿನ ನೇರಲಗುಡ್ಡ ಗ್ರಾಮಗಳಿಗೆ ಪಶುವೈದ್ಯ ಆಸ್ಪತ್ರೆಗಳು.</u>

840
ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ 'ಎಳನಡು' ಮತ್ತು ಶಿರಾ ತಾಲ್ಲೂಕಿನಲ್ಲಿ ' ನೇರಲಗುಡ್ಡ ' ಗ್ರಾಮಗಳಿಗೆ ಪಶುವೈದ್ಯ ಚಿಕಿತ್ಸಾಲಯಗಳ ಅವಶ್ಯಕತೆ ಇರುವುದು ಸರ್ಕಾರಕ್ಕೆ ತಿಳಿದಿದೆಯೇ?
ಆ) ಹಾಗಿದ್ದಲ್ಲಿ, 1993-94 ನೇ ಸಾಲಿನಲ್ಲಿ ಸದರಿ ಸ್ಥಳಗಳಿಗೆ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) ಹೌದು.
ಆ) 1993-94 ನೇ ಸಾಲಿನಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಇನ್ನು ಸ್ಥಳಗಳನ್ನು ಆಯ್ಕೆ ಮಾಡಿರುವುದಿಲ್ಲ. ಆಯ್ಕೆ ಮಾಡುವ ಸಮಯದಲ್ಲಿ ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಗಳಿಗೆ ಮಂಜೂರಾತಿ ನೀಡುವ ವಿಷಯವನ್ನು ಪರಿಶೀಲೀಸಲಾಗುವುದು.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನೇರಲಗುಡ್ಡ ಮತ್ತು ಎಳನಡು ಗ್ರಾಮಗಳಿಗೆ ಪಶುವೈದ್ಯ ಚಿಕಿತ್ಸಾಲಯಗಳ ಅವಶ್ಯಕತೆ ಇದೆ. ಇದನ್ನು 1993-94 ರಲ್ಲಿ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದೀರಿ. ತಾವು ತಾಕತ್ತು ಇರತಕ್ಕ ಮಂತ್ರಿಗಳಾಗಿದ್ದೀರಿ. ಇದನ್ನು ದಯಮಾಡಿ ಮಂಜೂರು ಮಾಡಬೇಕು.

ಶ್ರೀ ಟಿ. ಬಿ. ಜಯಚಂದ್ರ : ತಾಕತ್ತು ಅಂದರೆ ಸ್ವಲ್ಪ ಎಕ್ಸ್‌ಟ್ರಾ ತಾಕತ್ತು ಎಂದು ಇದೆ. ತಾಕತ್ತು ಎಲ್ಲಾರಿಗೂ ಇದೆ.

ಶ್ರೀ ವಾಟಾಳ್ ನಾಗರಾಜ್ : ತಾಕತ್ತು ಅಂದರೆ ಬಾದಾಮಿ ತಿನ್ನುತಾರೇನು ಅವರು.